‘ಕಳೆದ ವಾರ ನಿಮಗೆಲ್ಲ ಕಳಿಸಿದ ಕೇಸಿನ ಹಿಯರಿಂಗ್ ನಾಳೆ ಬೆಳಗ್ಗೆ ಹನ್ನೊಂದಕ್ಕೆ ಇದೆ, ಪ್ರತಿಸಲದಂತೆ ನಮ್ಮ ಡಬ್ಲ್ಯು.ಡಿ. ಆಫೀಸಿನಲ್ಲೇ ಅರೇಂಜ್ ಮಾಡಿದ್ದೇವೆ ಬನ್ನಿ’ ಅಂತ ನಮ್ಮ ಕಮಿಟಿಯ ಕಾಗದಪತ್ರ ನೋಡಿಕೊಳ್ಳುವ ಶಶಿರೇಖಾ ನಿನ್ನೆಯಷ್ಟೆ ಕರೆ ಮಾಡಿದ್ದರು. ಈ ಒಂದು ಕರೆಗೆ ಏನು ಕೆಲಸವಿದ್ದರೂ ಇದ್ದಲ್ಲೇ ಬಿಟ್ಟು ಓಡುವುದೇ. ಕೆಲಸದ ಸ್ಥಳದಲ್ಲಿ ನಡೆವ ಹೆಣ್ಣುಮಕ್ಕಳ ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟ ಸ್ಥಳೀಯ ದೂರು ನಿವಾರಣಾ ಸಮಿತಿ ಅದು. ನೊಂದ ಮಹಿಳೆಯರಿಗೆ ಏನಾದರೂ ಸಹಾಯ ಮಾಡಲು ಸಾಧ್ಯವಾದೀತು ಅಂತಾದರೆ ಅದು ಇಂಥವೇ ಏನಾದರೂ ಕೆಲಸಗಳಿಂದ ಅಂತ ಯಾಕೋ ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಅನ್ನಿಸುತ್ತಿದ್ದುದರಿಂದ, ಮೂರು ವರ್ಷಗಳ ಕೆಳಗೆ ಡಿ.ಸಿ. ಚೇಂಬರಿನಿಂದ ಬಂದ ಸದಸ್ಯತ್ವದ ಆಹ್ವಾನಕ್ಕೆ ಇಲ್ಲವೆನ್ನಲಾಗಿರಲಿಲ್ಲ. ಕೇಸಿನ ಫೈಲನ್ನು ತೆಗೆದು ಓದಲೂ ಸಮಯ ಸಿಗದೇ ಇದ್ದುದರಿಂದ, ಬಸ್ಸು ಹತ್ತಿದ ಕೂಡಲೇ ಸೀಟು ಸಿಕ್ಕಿದ್ದು ಒಂದು ರೀತಿಯಲ್ಲಿ ಸಹಕಾರಿಯೇ ಆಗಿತ್ತು. ಸುಮ್ಮನೇ ತಿರುವಿ ಹಾಕುತ್ತ ಕೂತಿದ್ದಾಗಲೇ ಧಾರವಾಡ ಬಂದದ್ದು ಗೊತ್ತೇ ಆಗಲಿಲ್ಲ.

ಎಲ್ಲರೂ ನನಗಿಂತ ಮೊದಲೇ ಬಂದು ಕೂತು ನನ್ನದೇ ತಡವಾಯಿತೋ ಅಂತ ಅವಸರದಲ್ಲೇ ಬಿಆರ್‌ಟಿಸಿ ಬಸ್ಸನ್ನಿಳಿದಿದ್ದೆ. ಪರ್ಸಿನಲ್ಲಿ ಮಡಿಚದೇ ಇಟ್ಟುಕೊಂಡ ಬಸ್ ಟಿಕೇಟಿನ ಕಂಪ್ಯೂಟರೈಸ್ಡ್ ಮಾರ್ಕನ್ನು ಗೇಟಿನ ಯಾಂತ್ರೀಕೃತ ಕೆಂಪು ಬೆಳಕಿನ ಚಕ್ರಕ್ಕೆ ಎಷ್ಟು ಒತ್ತಿ ಹಿಡಿದರೂ ಗೇಟು ಥಟ್ಟನೆ ಓಪನ್ ಆಗದೇ ಒಂದು ಕ್ಷಣ ಗಲಿಬಿಲಿಗೆ ಬಿದ್ದೆ. ನನ್ನ ದಿಗಿಲನ್ನು ನಿರುಕಿಸಿದ ಅಲ್ಲಿದ್ದ ನೀಲಿ ಯೂನಿಫಾರ್ಮಿನ ಸಿಬ್ಬಂದಿಯೊಬ್ಬ ಓಡಿ ಬಂದು ಸಹಾಯ ಮಾಡಿದ್ದ. ಗೇಟು ಓಪನ್ ಆದ ತಕ್ಷಣ ಫಟ್ಟನೆ ಗಾಳಿಯಷ್ಟೇ ವೇಗವಾಗಿ ದಾಟಿಕೊಳ್ಳದಿದ್ದರೆ ಪುನಃ ಎರಡೂ ಬದಿಯಿಂದ ರಭಸದಲ್ಲಿ ಬಂದು ಮುಚ್ಚಿಕೊಳ್ಳುವ ಗೇಟಿನ ಗಿಡ್ಡ ಬಾಗಿಲಲ್ಲಿ ಸಿಕ್ಕಿಹಾಕಿಕೊಂಡು ನರಳುವ ಅಪಾಯ ಎದುರಾಗುತ್ತಿತ್ತು. ಡಬ್ಲ್ಯು.ಡಿ. ಕಚೇರಿಯ ಸಣ್ಣ ಗುಡ್ಡ ಏರುವಾಗ ಶುರುವಾದ ಏದುಸಿರು ತಕ್ಷಣ ನನ್ನ ವಯಸ್ಸನ್ನು ನನಗೆ ನೆನಪಿಸಿ ಅಲ್ಲೇ ಮರೆಯಾಯಿತು. ಆಫೀಸಿನ ಗೇಟು ದಾಟಿ ಮೆಟ್ಟಿಲೇರುವಾಗ ನಮ್ಮ ಸಮಿತಿಯ ಇನ್ನುಳಿದ ಸದಸ್ಯರಾದ, ಕಳೆದ ಮೂವತ್ತು ವರ್ಷಗಳಿಂದ ಒಂದು ಅನಾಥ ಮಕ್ಕಳ ಬಾಲಮಂದಿರ ನಡೆಸುತ್ತಿರುವ ಸಿಸ್ಟರ್ ಡೇಸಿ ಹಾಗೂ ಸಾಂತ್ವನ ಎನ್.ಜಿ.ಓ.ದ ಕನ್ವೇನರ್ ರಜಿಯಾ ಮತ್ತು ಸಮಿತಿಯ ಅಧ್ಯಕ್ಷರಾದ ಡಬ್ಲ್ಯು.ಡಿ.ಓ. ಆಯುಕ್ತೆ ಬಸಂತಿ ಅಂಗಡಿಯವರು ಮೀಟಿಂಗ್ ಕೊಠಡಿಯನ್ನು ಅದಾಗ ಪ್ರವೇಶಿಸುತ್ತಿರುವುದು ಕಣ್ಣಿಗೆ ಬಿದ್ದು ಅಲ್ಲೇ ಸಮಾಧಾನಗೊಂಡೆ. ಹಾಯ್ ಹಲೋ ವಿನಿಮಯವಾಯಿತು.

ಅದು ಸರಕಾರಿ ಕಚೇರಿಯ ವಾತಾವರಣವಾದದ್ದರಿಂದ ಎಲ್ಲೆಡೆ ಸ್ವಲ್ಪ ಅಶಿಸ್ತು ಎದ್ದು ಕಾಣುತ್ತಿತ್ತು. ಮೀಟಿಂಗಿನ ಕೊಠಡಿಯ ಬಿಜಾಗರ ಸಡಿಲಗೊಂಡ ಬಾಗಿಲು ತುಸು ಕೆಳಗೆ ಜಾರಿದ್ದರಿಂದ ಅದು ಕಿರಿಗುಡುತ್ತ ಅರ್ಧವೇ ತೆರೆದುಕೊಂಡಿತು. ಅದರಲ್ಲೇ ಒಬ್ಬೊಬ್ಬರಾಗಿ ಅಡ್ಡ ತಿರುಗಿ ಹೊಕ್ಕಿಕೊಂಡು ಒಳ ಹೋದೆವು. ಕೊಠಡಿಯ ಮೂಲೆಯಲ್ಲಿ ಬಣ್ಣಗೆಟ್ಟ ಮುರಿದ ಬಾಗಿಲ ಶೌಚಾಲಯ ಹಣಕುತ್ತಿತ್ತು, ಕಟ್ಟಿದ ಹವೆಯಲ್ಲಿ ಎಂಥದೋ ಮುಗ್ಗಿದ ವಾಸನೆ ಮೂಗಿಗೆ ಹೊಡೆಯಿತು. ರೌಂಡ್ ಟೇಬಲ್ಲಿನ ಕುರ್ಚಿಗಳಲ್ಲಿ ಆಸೀನರಾದದ್ದೇ ಕಚೇರಿಯ ಶಾಂತಮ್ಮ ಓಡಿ ಬಂದು ಒಂದು ಬಟ್ಟೆಯ ಚೂರಿನಿಂದ ಟೇಬಲ್ಲಿನ ದೂಳು ಹೊಡೆಯತೊಡಗಿದರು. ಸ್ವಲ್ಪ ಸೈನಸ್ ಸಮಸ್ಯೆಯಿರುವ ಸಿಸ್ಟರ್ ಡೇಸಿ ಬಿಟ್ಟೂ ಬಿಡದೇ ಎಂಟ್ಹತ್ತು ಬಾರಿ ಸೀನಿದರು. ಅದನ್ನು ಕಂಡ ಬಸಂತಿ ಮೇಡಂ, ‘ಶಾಂತಮ್ಮ, ಮೊದಲೇ ಇವೆಲ್ಲ ಕೆಲಸ ಮುಗಿಸಿ ಕೂರಬೇಕು, ಮುಂದಿನ ಸಲ ಹೀಗೆ ಮಾಡ್ಬೇಡ’ ಅಂದರು. ಅದಕ್ಕೆ ಪ್ರತ್ಯುತ್ತರವೆಂಬಂತೆ